ಕಛೇರಿಯಲ್ಲಿ ಕಾರ್ಡುದಾರರ ಎಲ್ಲಾ ಕುಂದು ಕೊರತೆಯನ್ನು ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು.

**ರಾಷ್ಟ್ರೀಯ ತೋಟಗಾರಿಕೆ ಮಿಷನ್ ಕಾರ್ಯಕ್ರಮಗಳು**

**993 (1515) ಶ್ರೀ ಖಾದರ್ ಯು.ಟಿ. (ಮಂಗಳೂರು) :** ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳಾವುವು?

ಆ) ಈ ಯೋಜನೆಗೆ ಕೇಂದ್ರ ಸರ್ಕಾರ ನೀಡುತ್ತಿರುವ ಹಣ ಎಷ್ಟು;

ಇ) ರಾಜ್ಯ ಸರ್ಕಾರವು ಈ ಯೋಜನೆಗಾಗಿ ಎಷ್ಟು ಹಣ ಬಿಡುಗಡೆಗೊಳಿಸುತ್ತಿದೆ;

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆಯೇ; (ಕ್ಷೇತ್ರವಾರು ವಿವರ ನೀಡುವುದು)?

**ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :**

ಅ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು ಈ ಕೆಳಗಿನಂತಿವೆ.

The programmes being implemented under National Horticulture Mission scheme is given below.

1. ಸಸ್ಯಾಭಿವೃದ್ಧಿ, Nurseries
2. ಹಾಲಿ ಇರುವ ಅಂಗಾಂಶ ಕೃಷಿ ಘಟಕಗಳ ಪುನಶ್ಚೇತನ
   Rehabilitation of existing Tissue Culture Laboratories.
3. ತರಕಾರಿ ಬೀಜೋತ್ಪಾದನೆ ಹಾಗೂ ಬೀಜ ಸಂಸ್ಕರಣೆಗೆ ಮೂಲಭೂತ ಸೌಕರ್ಯ
   Vegetable Seed Production & infrastructure

4. ಹೊಸ ತೋಟಗಳ ಪ್ರದೇಶ ವಿಸ್ತರಣೆ (ಹಣ್ಣುಗಳು, ಪುಷ್ಪಾಭಿವೃದ್ಧಿ, ಸಾಂಬಾರು ಬೆಳೆ, ತೋಟದ ಬೆಳೆ ಮತ್ತು ಸುಗಂಧಿತ ಬೆಳೆ),

New Area Expansion (Fruits, Flowers, Spices, Plantation crops & Medicine & Aromatic crops)

5. 1ನೇ ವರ್ಷ ನಿರ್ವಹಣೆ (ಹಣ್ಣುಗಳು ಹಾಗೂ ತೋಟದ ಬೆಳೆಗಳು)

1st year Maintenance (Fruits & Plantation crops)

6. 2ನೇ ವರ್ಷ ನಿರ್ವಹಣೆ (ಹಣ್ಣುಗಳು ಹಾಗೂ ತೋಟದ ಬೆಳೆಗಳು)

2nd year Maintenance (Fruits & Plantation crops)

7. ಹಳೆ ತೋಟಗಳ ಪುನಶ್ಚೇತನ. Rejuvenation of Old Plantation

8. ಸಮುದಾಯ ಕೆರೆ / ಕೃಷಿ ಹೊಂಡ ನಿರ್ಮಾಣ. Community Tanks/ Ponds

9. ಸಂರಕ್ಷಿತ ಬೇಸಾಯ (ಹಸಿರು ಮನೆ, ನೆರಳು ಪರದೆ ಮತ್ತು ಹೊದಿಕೆ)

Protected Cultivation (Green House, Shade Nets & Mulching)

10. ಸಮಗ್ರ ಕೀಟ / ರೋಗ ನಿರ್ವಹಣೆ ಹಾಗೂ ಪ್ರಯೋಗ ಶಾಲೆ

Promotion of INM/IPM and Laboratories.

11. ಸಾವಯವ ಕೃಷಿ (ಪರಿವರ್ತನೆ ಮತ್ತು ಗುಂಪು ದೃಢೀಕರಣ, ಎರೆಹುಳು ಘಟಕ/ಜೀವನಾಸ ಘಟಕ)

Organic Farming (Organic Conversion & Certification, Vermi compost/ Bio-digesters)

12. ಮಾನವ ಸಂಪನ್ಮೂಲ ಅಭಿವೃದ್ಧಿ. Human Resource Development

13. ಜೇನು ಸಾಕಾಣಿಕೆ ಮುಖಾಂತರ ತೋಟಗಾರಿಕೆ ಬೆಳೆಗಳಲ್ಲಿ ಪರಾಗಸ್ಪರ್ಷ ಉತ್ತೇಜನ.

Pollination Support through Bee-Keeping.

14. ಮುಂಚೂಣಿ ಪ್ರಾತ್ಯಕ್ಷತೆ. Frontline Demonstrations

15. ಕೊಯ್ಲೋತ್ತರ ನಿರ್ವಹಣೆ. Post Harvest Management.

16. ಮಾರುಕಟ್ಟೆ ಅಭಿವೃದ್ಧಿ. Establishment of Market infrastructure

17. ಹೊಸ ಅನ್ವೇಷಣೆ. Innovative Components.

ಆ) 2005–06 ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು ರೂ. 420.13 ಕೋಟಿಗಳು.

From 2005-06 to till now Rs. 420.13 Crores.

ಇ) ರೂ.39.98 ಕೋಟಿಗಳು.

Rs.39.98 Crores.

ಈ) ಹೌದು. ಕ್ಷೇತ್ರವಾರು ವಿವರ ಈ ಕೆಳ ಕಂಡಂತಿದೆ.

Yes. Constituency wise details given below.

| ಕ್ರ. ಸಂ. | ಕ್ಷೇತ್ರ | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಮಂಗಳೂರು | 273.06 |
| 2 | ಬೆಳ್ತಂಗಡಿ | 353.12 |
| 3 | ಸುಳ್ಯ | 298.44 |
| 4 | ಪುತ್ತೂರು | 354.35 |
| 5 | ಬಂಟ್ವಾಳ | 462.60 |
| | **ಒಟ್ಟು** | **1741.57** |

**ಪರಿಸರ ಮಾಲಿನ್ಯ**

**994 (1516) ಶ್ರೀ ಖಾದರ್ ಯು.ಟಿ. (ಮಂಗಳೂರು) :** ಮಾನ್ಯ ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚೆಗೆ ಪರಿಸರ ಮಾಲಿನ್ಯ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;